# IN THE COURT OF CIVIL JUDGE & J.M.F.C, MUDALAGI

## C.C.1335/2022

C.W: 15
P.W: 8

**Date: 28-10-2025**

| | | |
|---|---|---|
| Name of the Witness | : | Dr. Gangadhar Umarani |
| Name of the Father/Husband | : | Shankar |
| Age | : | 46 Years. |
| Job | : | Medical Officer, Ganga Hospital, Gokak . |
| Place | : | Gokak. |

**Chief Examination by A.P.P :**

I am working at Ganga Private Hospital, Gokak since 2018.

That on 09.05.2022 at about 9:50 p.m., accused by name Venkappa Malali came to hospital with the history of RTA. On examination I found fracture at scapula at left side, compound fracture to proximal plahynx of $2^{nd}$ and $3^{rd}$ toe of left foot, fracture to the neck of $3^{rd}$ and $4^{th}$ metatarsal of left foot. Said injuries are grievous in nature. Accordingly I have issued Wound Certificate. Witness identified the Wound Certificate issued by him and the same is marked as Ex.P-11 and signature is marked as Ex. P-11(a). Said injuries may occur if a person hit by hard and blunt object in RTA.

On the same day at about 9:43 p.m., CW-13 came to hospital with the history of RTA. On examination I found fracture of facial bone left side, compound fracture to proximal plahynx of $3^{rd}$ toe of left foot. Said injuries are grievous in nature. Accordingly I have issued Wound Certificate. Witness identified the Wound Certificate issued by him and the same is marked as Ex.P-12 and signature is marked as Ex. P-12(a). Said injuries may occur if a person hit by hard and blunt object in RTA.

**<u>Cross Examination : adv for accused No.1 Sri. RMA:</u>**

On that day patients were accompanied by one Veeranna Malali. Patients did not came up with police requisition for treatment. Both were admitted as a in-patient for treatment. It is false to suggest that, the injuries mentioned at Ex.P-11 did not suffer by injured in an accident. It is false to suggest that, the injuries mentioned at Ex.P-12 did not suffer by injured in an accident. It is false to suggest that, I have issued false wound certificates and deposing falsely on the say of I.O. in order to help victim.

**No further examination.**

Read over and explained to the witness and admitted the same.

**C.J. & J.M.F.C, Mudalagi.**

# **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.**

ಸಿ.ಸಿ. ನಂಃ **1335/2022**

ಸಿ.ಡಬ್ಲ್ಯೂ- 14
ಪಿ.ಡಬ್ಲ್ಯೂ- 7

**ದಿನಾಂಕಃ 28-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಸದಾಶಿವ ಮರಲಿಂಗನವರ |
| ತಂದೆಯ/ಗಂಡನ ಹೆಸರು | : | ರಾಯಪ್ಪ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಹಿರಿಯ ಮೋಟಾರ ವಾಹನ ನಿರೀಕ್ಷಕರು ಗೋಕಾಕ |
| ವಾಸ ಸ್ಥಳ | : | ಗೋಕಾಕ |
| ತಾಲೂಕು | : | ಗೋಕಾಕ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:- V.C. ಮೂಲಕ**

ನಾನು ದಿಃ 03-08-2020 ರಿಂದ 31-01-2023 ರವರೆಗೆ ಹಿರಿಯ ಮೋಟಾರ ವಾಹನ ನಿರೀಕ್ಷಕರು ಗೋಕಾಕ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 18-07-2022 ರಂದು ಚಾಸಾ 22 ರವರು ಪ್ರಸ್ತುತ ಪ್ರಕರಣದಲ್ಲಿ ಅಪಘಾತಪಡಿಸಿದ ಮತ್ತು ಅಪಘಾತಕ್ಕೆ ಒಳಗಾದ ದ್ವಿಚಕ್ರ ವಾಹನ No. KA 49 K 1066 ಮತ್ತು ದ್ವಿಚಕ್ರ ವಾಹನ No. KA 69 E 7089 ನ್ನು IMV ತಪಾಸಣೆ ಮಾಡುವಂತೆ ನನಗೆ ನಿವೇದನೆ ಸಲ್ಲಿಸಿರುತ್ತಾರೆ. ಅದೇ ದಿನ ಸಂಜೆ 5 ಗಂಟೆಗೆ ಕುಲಗೋಡು ಪೋಲೀಸ ಠಾಣೆ ಆವರಣಕ್ಕೆ ಬೇಟಿ ನೀಡಿ, ದ್ವಿಚಕ್ರ ವಾಹನ No. KA 69 E 7089 ನ್ನು ಪರಿಶೀಲಿಸಿ ನೋಡಲಾಗಿ ಮುಂದಿನ number plate, ಮುಂದಿನ ಎಡಬದಿಯ crash guard, ಮುಂದಿನ ಎಡಬದಿಯ indicator, ಮುಂದಿನ ಎಡಬದಿಯ ಚಾಲಕನ footrest ಜಕಂಗೊಂಡಿರುತ್ತದೆ.

ದ್ವಿಚಕ್ರ ವಾಹನ No. KA 49 K 1066 ನ್ನು ಪರಿಶೀಲಿಸಿ ನೋಡಲಾಗಿ ಮುಂದಿನ head light ಮತ್ತು head light doom cover, ಮುಂದಿನ number plate, ಮುಂದಿನ wheel mud guard, speedo meter unit ಜಕಂಗೊಂಡಿರುತ್ತದೆ. ಅದೇ ದಿನ ತನಿಖಾಧಿಕಾರಿಗೆ IMV ವರದಿಯನ್ನು ಸಲ್ಲಿಸಿರುತ್ತೇನೆ. IMV ವರದಿಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಎರಡೂ ವಾಹನಗಳನ್ನು ಚಲಾಯಿಸಿ ನೋಡಲಾಗಿ ವಾಹನಗಳ ಅಡೆತಡೆಗಳು ಸುಸ್ಥಿತಿಯಲ್ಲಿರುವುದು ಕಂಡುಬಂದಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಅಪಘಾತವು ವಾಹನಗಳ ಯಾಂತ್ರಿಕ ಮತ್ತು ತಾಂತ್ರಿಕ ದೋಷಗಳಿಂದ ಉಂಟಾಗಿರುವುದಿಲ್ಲ.

**ಪಾಟೀ ಸವಾಲುಃ  1 ನೇ ಆರೋಪಿ ಪರ Sri.RMA ವಕೀಲರಿಂದಃ**

ನಿಪಿ-10 ರಲ್ಲಿ ಹೇಳಿರುವ ಎರಡೂ ವಾಹನಗಳ ಜಕಂಗಳು ಪ್ರಸ್ತುತ ಪ್ರಕರಣದಲ್ಲಿ ಹೇಳಿರುವ ಅಪಘಾತದಿಂದ ಆದ ಜಕಂಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಕುಲಗೋಡು ಠಾಣಾ ಆವರಣಕ್ಕೆ ಭೇಟಿ ನೀಡಿರುವುದಿಲ್ಲ, ವಾಹನಗಳನ್ನು IMV ತಪಾಸಣೆಗೆ ಒಳಪಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗೆ ಸಹಾಯ ಮಾಡಲು ವಾಹನಗಳ ಭಾವಚಿತ್ರಗಳ ಆಧಾರದ ಮೇಲೆ ಸುಳ್ಳು IMV ವರದಿಯನ್ನು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕಚೇರಿಯಲ್ಲಿ ವಾಹನಗಳ ಭಾವಚಿತ್ರಗಳ ಆಧಾರದ ಮೇಲೆ ನಿಪಿ-10 ನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.